**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಲಘಟಗಿ**

**ಸಿ.ಸಿ ನಂ.39-2024**

**ಫಿರ್ಯಾದಿದಾರ:** ಉಸ್ಮಾನಖಾನ ಜಾಗೀರದಾರ

ವಿರುದ್ಧ

**ಆಪಾದಿತ:** ಕಲಾವತಿ ಭೋವಿ

# ಆಪಾದನೆ

ಶ್ರೀ ಗಣೇಶ ಎನ್, ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ. ಕಲಘಟಗಿ ಆದ ನಾನು ನಿಮ್ಮ ಮೇಲೆ ಹೊರಿಸುವ ಆಪಾದನೆ ಈ ಕೆಳಗಿನಂತಿದೆ.

ನೀವು ಪಿರ್ಯಾದಿದಾರರಿಗೆ ಪರಿಚಯಸ್ಥರಾಗಿದ್ದು ನಿಮ್ಮ ಆರ್ಥಿಕ ಅಡಚಣೆಗಳನ್ನು ನಿವಾರಿಸಿಕೊಳ್ಳುವ ಉದ್ದೇಶದಿಂದ ಪಿರ್ಯಾದಿದಾರರಿಂದ 05-08-2023 ರಂದು ರೂ 4,10,000/- ಸಾಲವನ್ನು ಪಡದುಕೊಂಡಿದ್ದು ಅದರ ಮರುಪಾವತಿಗಾಗಿ ಕೆನರಾ ಬ್ಯಾಂಕಿನ ನಿಮ್ಮ ಖಾತೆಯ ಚೆಕ್ ಸಂಖ್ಯೆ 224522 ರ ದಿನಾಂಕಃ 13-12-2023 ರಲ್ಲಿ ರೂ 4,10,000/- ಗಳಿಗೆ ನೀಡಿದ್ದು ಅದನ್ನು ನಗದೀಕರಣಕ್ಕಾಗಿ ಪಿರ್ಯಾದಿದಾರರು ಒಪ್ಪಿಸಿದಾಗ ಸದರಿ ಚೆಕ್ಕು ತಮ್ಮ ಖಾತೆಯಲ್ಲಿ ಸಾಕಷ್ಟು ಹಣ ಎಂಬ ಹಿಂಬರಹದೊಂದಿಗೆ ನಗದೀಕಾರಣವಾಗದೆ ಉಳಿದಿದ್ದು, ಸದರಿ ನಗದೀಕರಣವಾಗದೆ ಬಂದ ಹಿಂಬರಹದ ವಿಚಾರವಾಗಿ ಪಿರ್ಯಾದಿದಾರರು ನಿಮಗೆ ದಿನಾಂಕಃ 14-12-2023 ರಂದು ಕಾನೂನು ನೋಟಿಸು ಕೊಟ್ಟಿದ್ದರೂ ಸಹ, ನೀವು ಪ್ರತ್ಯುತ್ತರ ನೀಡದೆ ಮತ್ತು ಹಣವನ್ನು ಸಂದಾಯ ಮಾಡದೆಯಿದ್ದು ಸದರಿ ನಿಮ್ಮ ಕೃತ್ಯವು ಕಲಂ 138 ರ ನೆಗೋಷಿಬಲ್ ಇನಸ್ಟ್ರುರಮೆಂಟ ಆಕ್ಟ 1881 ಅಡಿಯಲ್ಲಿ ಅಪಾರಾಧವಾಗಿದ್ದು, ಸದರಿ ಅಪರಾಧವನ್ನು ನೀವು ಈ ನ್ಯಾಯಾಲಯದ ಸಂಜ್ಞಾದಲ್ಲಿ ಎಸುಗಿರುತ್ತೀರಿ.

ಪ್ರಶ್ನೆಃ1)ಈಗ ಓದಿ ಹೇಳಿದ ಆಪಾದನೆ ನಿನಗೆ ತಿಳಿಯತೇ?

ಆಪಾದಿತಳ ಉತ್ತರಃ

ಪ್ರಶ್ನೆಃ2 ಈ ಆಪಾದನೆಯನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಯಾಗಬೇಕೊ?

ಆಪಾದಿತಳ ಉತ್ತರಃ

(ಆಪಾದಿತಳಿಗೆ ಆಪಾದನೆಯನ್ನು ಓದಿ ತಿಳಿಸಿ ನಂತರ ಆಪಾದಿತನ ಉತ್ತರವನ್ನು ಪಡೆಯಲಾಗಿದೆ.)

**ಸ್ಥಳಃ ಕಲಘಟಗಿ**

**ದಿನಾಂಕಃ 17-09-2024**

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**
**ಕಲಘಟಗಿ.**